ನಮಗೆ ಹಣ ಬಿಡುಗಡೆ ಮಾಡುತ್ತೇವೆಂದು ಆಶ್ವಾಸನೆ ಕೊಡಬೇಕು. ಇಲ್ಲ ಅಂದರೆ ನಾವು ಪ್ರತಿಭಟನೆ ಮಾಡುತ್ತೇವೆ. ತಾವು ಸ್ಟೇಟ್‌ಮೆಂಟ್ ಮಾಡುವ ಭರವಸೆಯನ್ನು ಕೊಡಬೇಕು.

ಉಪಾಧ್ಯಕ್ಷರು : ಮಾನ್ಯ ಮಂತ್ರಿಗಳು ಈಗಾಗಲೇ ಹೇಳಿದ್ದಾರೆ ದಯಮಾಡಿ ತಾವು ಕುಳಿತುಕೊಳ್ಳಬೇಕು. ಈಗ ಒಂದು ಪ್ರಕಟಣೆ.

ಪ್ರಕಟಣೆ.

ಉಪಾಧ್ಯಕ್ಷರು : ವಿಧಾನ ಪರಿಷತ್ತಿನ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ಬಂದಿದೆ.

"ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 114ರ ಮೇರೆಗೆ ಈ ಕೆಳಕಂಡ ವಿಧೇಯಕಗಳಿಗೆ ಕರ್ನಾಟಕ ವಿಧಾನ ಪರಿಷತ್ತು ತನ್ನ ಅನುಮೋದನೆಯನ್ನು ನೀಡಿದೆ ಎಂದು ತಿಳಿಸಿರುತ್ತಾರೆ.

1. ಕರ್ನಾಟಕ ಧನ ವಿನಿಯೋಗ ವಿಧೇಯಕ, 1991.
2. ಕರ್ನಾಟಕ ಧನವಿನಿಯೋಗ (ಲೇಖಾನುದಾನ) ವಿಧೇಯಕ, 1991.
3. ಕರ್ನಾಟಕ ವಿಧಾನ ಮಂಡಲ (ಅನರ್ಹತಾ ನಿವಾಹಣೆ) (ತಿದ್ದುಪಡಿ) ವಿಧೇಯಕ, 1991.
4. ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ತಿದ್ದುಪಡಿ) ವಿಧೇಯಕ, 1991.
5. ಕರ್ನಾಟಕ ಸ್ಥಳೀಯ ಪ್ರದೇಶಗಳೊಳಗೆ ಅಲ್ಲಿಗೆ ಬಳಕೆ ಉಪಯೋಗ ಅಥವಾ ಮಾರಾಟಕ್ಕಾಗಿ ಬರುವ ಸರಕುಗಳ ಮೇಲಣ ತೆರಿಗೆ (ತಿದ್ದುಪಡಿ) ವಿಧೇಯಕ, 1991.
6. ಕರ್ನಾಟಕ ಕೃಷಿ ಆಧಾಯ ತೆರಿಗೆ (ತಿದ್ದುಪಡಿ) ವಿಧೇಯಕ, 1991.
7. ಕರ್ನಾಟಕ ವೃತ್ತಿಗಳ, ಕಸಬುಗಳ ಅಜೀವಿಕೆಗಳ ಮತ್ತು ಉದ್ಯೋಗಗಳ ಮೇಲಣ ತೆರಿಗೆ (ತಿದ್ದುಪಡಿ) ವಿಧೇಯಕ, 1991.
8. ಕರ್ನಾಟಕ ಮಾರಾಟ ತೆರಿಗೆ (ತಿದ್ದುಪಡಿ) ವಿಧೇಯಕ, 1991.
9. ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕ, 1991.
10. ಕರ್ನಾಟಕ ಸ್ಟ್ಯಾಂಪ್ (ತಿದ್ದುಪಡಿ) ವಿಧೇಯಕ, 1991.

ನಿಯಮ 334ರ ಮೇರೆಗೆ

ಸೋಮವಾರಪೇಟೆ ತಾಲ್ಲೂಕಿನ ಹೆಬ್ಬಾಲೆ ಗ್ರಾಮದ ಹತ್ತಿರ ಸೇತುವೆ ನಿರ್ಮಾಣ ಮಾಡುವುದು.

ಶ್ರೀ ಎ.ಎಂ. ಬೆಳ್ಳಿಯಪ್ಪ (ಸೋಮವಾರಪೇಟೆ) : ಮಾನ್ಯ ಉಪಾಧ್ಯಕ್ಷಿಣಿಯವರೆ, ಕಾವೇರಿ ಹೊಳೆಗೆ ಅಡ್ಡಲಾಗಿ ಕೊಡುವ ಜಿಲ್ಲೆ ಸೋಮವಾರ ಪೇಟೆ ತಾಲೂಕು ಹೆಬ್ಬಾಲೆ ಗ್ರಾಮದಿಂದ ಮೈಸೂರು ಜಿಲ್ಲೆ ಪಿರಿಯಾಪಟ್ಟಣ ತಾಲೂಕು ಬೆಟ್ಟದ ಪುರ ಹೋಬಳಿಗೆ ಹೋಗಲು ಸೂಳಿಕೋಟೆ ಸೇತುವೆಯನ್ನು ನಿರ್ಮಾಣ ಮಾಡಲು ಸರ್ಕಾರ ಈಗಾಗಲೇ ಅಂದಾಜು 30 ಲಕ್ಷ ರೂ. ಖರ್ಚು ಮಾಡಿದ್ದರೂ ಸದರಿ ಸೇತುವೆಯ ಕೆಲಸ 2 ವರ್ಷಗಳಿಂದ ಸ್ಥಗಿತವಾಗಿ ನಿಂತಿದೆ. ಈ ಸೇತುವೆಯು ಆ ಭಾಗದ ಜನಗಳಿಗೆ ಬಹಳ ಅವಶ್ಯಕವಾಗಿರುವುದರಿಂದ ಸನ್ಮಾನ್ಯ ಮುಖ್ಯ ಮಂತ್ರಿಗಳು ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶ ಕೊಟ್ಟು ಈ ಸೇತುವೆಯನ್ನು ತ್ವರಿತವಾಗಿ ಪೂರ್ಣಗೊಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ) : ಮಾನ್ಯ ಉಪಾಧ್ಯಕ್ಷಿಣಿಯವರೆ, ಕಾವೇರಿ ಹೊಳೆಗೆ ಅಡ್ಡಲಾಗಿ ಕೊಡಗು ಜಿಲ್ಲೆ, ಸೋಮವಾರಪೇಟೆ ತಾಲ್ಲೂಕು ಹೆಬ್ಬಾಲೆ ಗ್ರಾಮದಿಂದ ಮೈಸೂರು ಜಿಲ್ಲೆ ಪಿರಿಯಾಪಟ್ಟಣ ತಾಲ್ಲೂಕು ಬೆಟ್ಟದಪುರ ಹೋಬಳಿಗೆ ಹೋಗಲು ಸೂಳಿಕೋಟೆಯ ಬಳಿ ಕಾವೇರಿ ನದಿಗೆ ಅಡ್ಡಲಾಗಿ ನಿರ್ಮಿಸಲು ಉದ್ದೇಶಿಸಲಾಗಿರುವ ಸೇತುವೆಯ ಕಾಮಗಾರಿಗೆ ಫೆಬ್ರುವರಿ 1977ರಲ್ಲಿ ಸರ್ಕಾರದಿಂದ 37.72 ಲಕ್ಷ ರೂ.ಗಳಿಗೆ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿತ್ತು. (ಸರ್ಕಾರಿ ಆದೇಶ ಸಂಖ್ಯೆ ಪಿಡಬ್ಲ್ಯೂಡಿ 233 ಸಿಬಿಆರ್ 76 ದಿನಾಂಕ 5-21977)

ಈ ಕಾಮಗಾರಿಗಳನ್ನು ಮೆ. ಗ್ಯಾವ್‌ನ ಇಂಡಿಯ ಲಿಮಿಟೆಡ್‌ನವರಿಗೆ ಅವರ ಸ್ವಂತ ವಿನ್ಯಾಸದಂತೆ ಸೇತುವೆಯನ್ನು ಕಟ್ಟಲು ಗುತ್ತಿಗೆಗೆ ಮೇ 1979ರಲ್ಲಿ ಕೊಡಲು ತೀರ್ಮಾನಿಸಲಾಯಿತು. ಆದರೆ ಈ ಗುತ್ತಿಗೆದಾರರು ಟೆಂಡರಿನ ಕಾಲಾವಧಿಯನ್ನು ವಿಸ್ತರಿಸುವಾಗ ತಮ್ಮ ಟೆಂಡರ್‌ನಲ್ಲಿ ನಮೂದಿಸಿರುವ ದರಕ್ಕಿಂತ ಹೆಚ್ಚಿಗೆ ದರದ ಬೇಡಿಕೆಯ ನಿಬಂಧನೆಗಳನ್ನು ಒಡ್ಡಿದರು. ಆದುದರಿಂದ ಗುತ್ತಿಗೆಯನ್ನು ತಿರಸ್ಕರಿಸಲಾಯಿತು.

1982-83ನೇ ಸಾಲಿನಲ್ಲಿ ಈ ಕಾಮಗಾರಿಯನ್ನು ಆಯವ್ಯಯದಲ್ಲಿ ಸೇರಿಸಿ 42 ಲಕ್ಷ ರೂ.ಗಳ ಅಂದಾಜಿಗೆ ಆಡಳಿತಾತ್ಮಕ ಮಂಜೂರಾತಿಯನ್ನು ನೀಡಿ ಮೆ. ಕೆ.ಎಸ್.ಸಿ.ಸಿ.ಯವರಿಗೆ ಟೆಂಡರ್ ಆಧಾರದ ಮೇಲೆ ಕಾಮಗಾರಿಯನ್ನು ವಹಿಸಿಕೊಡಲಾಯಿತು. ಮೆ. ಕೆ.ಎಸ್.ಸಿ.ಸಿ.ಯವರು ಕಾಮಗಾರಿಯನ್ನು ಪ್ರಾರಂಭಿಸಿ ಸುಮಾರು 20 ಲಕ್ಷ ರೂ.ಗಳ ಪ್ರಗತಿಯನ್ನು ಮಾಡಿದ್ದಾರೆ. ಈ ಕಾಮಗಾರಿಯನ್ನು 87ನೇ ಇಸವಿಯಲ್ಲಿ ಜಿಲ್ಲಾ ಪರಿಷತ್ತಿಗೆ ವರ್ಗಾಯಿಸಲಾಯಿತು. ಈ ಬೃಹತ್ ಕಾಮಗಾರಿಯನ್ನು ಜಿಲ್ಲಾ ಪರಿಷತ್ತಿನ ಅನುದಾನದಿಂದ ತೆಗೆದುಕೊಳ್ಳಲು ಸಾಧ್ಯವಿಲ್ಲವಾದ್ದರಿಂದ, ಈ ಕಾಮಗಾರಿಯನ್ನು ಲೋಕೋಪಯೋಗಿ ಇಲಾಖೆಯವರೆ ಮುಂದುವರಿಸಬೇಕೆಂದು ಜಿಲ್ಲಾ ಪರಿಷತ್ತಿನವರು ಕೋರಿದ್ದಾರೆ. ಇದರಿಂದ ಈ ಕಾಮಗಾರಿಯನ್ನು ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಗೆ ತೆಗೆದುಕೊಳ್ಳುವಂತೆ ಉನ್ನತ ಮಟ್ಟದ ಸಮಿತಿಯಲ್ಲಿ ಇತ್ತೀಚೆಗೆ ತೀರ್ಮಾನವಾಗಿದೆ. ಶೀಘ್ರದಲ್ಲಿ ಈ ಸೇತುವೆಯ ಕಾಮಗಾರಿಯನ್ನು ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಗೆ ತೆಗೆದುಕೊಂಡು ಕಾಮಗಾರಿಯನ್ನು ಪ್ರಾರಂಭಿಸಲು ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು. ಕಾಮಗಾರಿಯನ್ನು ತೆಗೆದುಕೊಂಡು ನಂತರ ಸುಮಾರು 2 ವರ್ಷಗಳಲ್ಲಿ ಪೂರ್ಣಗೊಳಿಸಲಾಗುವುದು.

(2) ಯಳಂದೂರು ತಾಲ್ಲೂಕಿನ ಹುನ್ನೂರು ಕಬಿನಿ ನಾಲೆಯಲ್ಲಿ ಕೆಲವು ಕಡೆ ಸರಿಯಾಗಿ ಕೆಲಸ ಆಗದಿರುವುದರಿಂದ ನೀರು ಹಾಯದೆ ರೈತರಿಗೆ ತೊಂದರೆ.

ಶ್ರೀ ಎಂ. ಸಿದ್ದಮಾದಯ್ಯ (ಕೊಳ್ಳೇಗಾಲ): ಮಾನ್ಯ ಉಪಾಧ್ಯಕ್ಷಿಣಿಯವರೆ, ಯಳಂದೂರು ತಾಲ್ಲೂಕು ಹೊನ್ನೂರು ಕಬಿನಿ ನಾಲಾ ಕೆಲಸವು ಸಂತೆಮಾರಹಳ್ಳಿ ಕೆಳಗೆ ಬರುವ 38ನೇ ಡಿಸ್ಟ್ರಿಬ್ಯೂಟ್‌ನಿಂದ ಮುಂದಕ್ಕೆ ಚಾನಲ್ ಕೆಲಸ ಸರಿಯಾಗಿ ವ್ಯವಸ್ಥೆ ಮಾಡದೆ ಇನ್ನೂ ಸಹ ನೀರು ಹಾಯದೆ ರೈತರಿಗೆ ತೊಂದರೆಗಳು ಆಗಿರುತ್ತದೆ. ಈ ವಿಚಾರವನ್ನು ಸರ್ಕಾರದ ಗಮನಕ್ಕೆ ತಂದರೂ ಸಹ ಅಧಿಕಾರಿಗಳ ಅಸಡ್ಡೆಯಿಂದ ಈ ಕೆಲಸಗಳು ನಡೆಯುತ್ತಿಲ್ಲ. 50ನೇ ಡಿಸ್ಟ್ರೀಬ್ಯೂಟ್‌ರಿನ ಕೆಲಸ ಸ್ಥಗಿತವಾಗಿದೆ. ದಯಮಾಡಿ ಸರ್ಕಾರ ಉದಾರ ಮನಸ್ಸು ಮಾಡಿ ಈ ಕೆಳಗೆ ಡಿಸ್ಟ್ರಿಬ್ಯೂಟರಿ ಕೆಲಸಗಳನ್ನು ಕೈಗೊಂಡು ರೈತರ ಮನಸ್ಸನ್ನು ಸಂತೋಷಪಡಿಸಿ ಕೊಡಬೇಕೆಂದು ಮತ್ತು ಚಿಕ್ಕ ಚಿಕ್ಕ ಕಾಲುವೆಗಳೂ ಸಹ ಲೆವೆಲ್ ಇಲ್ಲದೆ ಅನೇಕ ಕಡೆ ತೊಂದರೆ ಸಹ ಇರುತ್ತದೆ. ಸರ್ಕಾರ ಅಧಿಕಾರಿಗಳಿಗೆ ಎಚ್ಚರಿಗೆಯನ್ನು ಕೊಟ್ಟು ವ್ಯವಸ್ಥೆ ಮಾಡಿಕೊಡಬೇಕಾಗಿ ಸರ್ಕಾರವನ್ನು ಒತ್ತಾಯಿಸುತ್ತೇನೆ.